# ನಿಮ್ಮೊಡನೆ

## ಮೊಬೈಲ್ ಫೋನ್ ಅಪಶ್ರುತಿ!

ತಂತ್ರಜ್ಞಾನ ನವೀಕರಣಗೊಂಡಂತೆಲ್ಲ ಮನುಷ್ಯನ ಖಾಸಗೀ ವಲಯ ಕಿರಿದಾಗುತ್ತಲೇ ಬಂದಿದೆ. ರೇಡಿಯೊ, ದೂರದರ್ಶನ, ದೂರವಾಣಿ, ಕಂಪ್ಯೂಟರ್, ಮುಂತಾದವು ಮನುಷ್ಯ ಸಂಬಂಧಗಳ ನಡುವೆ ನುಸುಳತೊಡಗಿ ದಶಕಗಳೇ ಕಳೆದಿವೆ. ಆದರೆ, ತಂತ್ರಜ್ಞಾನದ ಈ ಹಸ್ತಕ್ಷೇಪ ನಡುಮನೆಯ ಚೌಕಟ್ಟಿಗೆ ಒಳಪಟ್ಟಿದ್ದು, ಹಾಸಿಗೆಯವರೆಗೂ ಬಂದಿರಲಿಲ್ಲ. ಈಗ ಅದೂ ಆಗಿದೆ.

ಗಂಡ ಹೆಂಡಿರನ್ನು ಸಂಸಾರದ ಬಂಡಿಯ ಎರಡು ಚಕ್ರಗಳು ಎನ್ನಲಾಗುತ್ತದೆ. ಈಗ ಈ ಬಂಡಿಗೆ ಮೂರನೇ ಚಕ್ರವೊಂದು ಸೇರಿಕೊಂಡಿದೆ, ಮೊಬೈಲ್ ಫೋನ್ ಮೂಲಕ. ಈ ಹೊಸ ಸೇರ್ಪಡೆ ಸಂಸಾರದ ಬಂಡಿಯ ಸರಾಗ ಸಂಚಾರಕ್ಕೆ ಅನುಕೂಲ ಮಾಡಿಕೊಡುವ ಬದಲು, ಗಂಡ–ಹೆಂಡತಿ ನಡುವೆ ಅಪಶ್ರುತಿ ಉಂಟಾಗಲಿಕ್ಕೆ ಕಾರಣವಾಗಿದೆ! ಮೂರನೇ ವ್ಯಕ್ತಿಯ ರೂಪದಲ್ಲಿ ಕಾಣಿಸಿಕೊಳ್ಳುತ್ತಿರುವ ಸೆಲ್ ಫೋನ್– ಸಂಗಾತಿಗಳ ನಡುವೆ ಮುನಿಸು, ಸಂಘರ್ಷ, ವಿರಸ, ಮಾನಸಿಕ ಕ್ಷೋಭೆಗೆ ಕಾರಣವಾಗುತ್ತಿದೆ.

ತಂತ್ರಜ್ಞಾನ ನವೀಕರಣಗೊಂಡಂತೆಲ್ಲ ಮನುಷ್ಯನ ಖಾಸಗೀ ವಲಯ ಕಿರಿದಾಗುತ್ತಲೇ ಬಂದಿದೆ. ರೇಡಿಯೊ, ದೂರದರ್ಶನ, ದೂರವಾಣಿ, ಕಂಪ್ಯೂಟರ್, ಮುಂತಾದವು ಮನುಷ್ಯ ಸಂಬಂಧಗಳ ನಡುವೆ ನುಸುಳತೊಡಗಿ ದಶಕಗಳೇ ಕಳೆದಿವೆ. ಆದರೆ, ತಂತ್ರಜ್ಞಾನದ ಈ ಹಸ್ತಕ್ಷೇಪ ನಡುಮನೆಯ ಚೌಕಟ್ಟಿಗೆ ಒಳಪಟ್ಟಿದ್ದು, ಹಾಸಿಗೆಯವರೆಗೂ ಬಂದಿರಲಿಲ್ಲ. ಒಂದೂವರೆ ದಶಕದ ಹಿಂದೆ ಕೈಗಳಲ್ಲಿ ಕಾಣಿಸಿಕೊಳ್ಳತೊಡಗಿದ ಮೊಬೈಲ್ ಫೋನ್‌ಗಳು ಬದುಕಿನ ಗತಿಯನ್ನೇ ಬದಲಿಸಿದವು. ಬೆರಳ ತುದಿಯಲ್ಲಿ ವಿಶ್ವವನ್ನು ತಂದಿರಿಸಿದ ಮೊಬೈಲ್ ತಂತ್ರಜ್ಞಾನ ಅದೇ ವೇಳೆಗೆ ನಮ್ಮ ವಿವೇಕವನ್ನು ಮಬ್ಬಾಗಿಸತೊಡಗಿತು. ಆ ಕಾರಣದಿಂದಲೇ ಕುಟುಂಬದ ಸದಸ್ಯರಿಗಿಂತಲೂ ಫೋನ್ ಸಖ್ಯವೇ ಅನೇಕರಿಗೆ ಅವರಿಗೆ ಗೊತ್ತಿಲ್ಲದಂತೆಯೇ ಹೆಚ್ಚು ಆಪ್ಯಾಯಮಾನ ಎನ್ನಿಸಿದೆ. ಮಕ್ಕಳೊಡನೆ ಆಟವಾಡುವುದಕ್ಕೆ, ಅವರಿಗೆ ಲೋಕವಿವೇಕ ಹೇಳಿಕೊಡಲಿಕ್ಕೆ, ಮಡದಿಯೊಡನೆ ಲಲ್ಲೆಮಾತು ಆಡಲಿಕ್ಕೆ ದೊರಕದ ಸಮಯ, ಫೇಸ್‌ಬುಕ್ ಗೆಳೆಯರೊಂದಿಗಿನ ಸಂವಹನಕ್ಕೆ ದೊರೆಯುತ್ತಿದೆ. ಸಾಮಾಜಿಕ ಜಾಲತಾಣಗಳ ಮೂಲಕ ವಿಶ್ವಮಾನವರಾಗುವ ಹುಂಬತನದಲ್ಲಿ ಮಲಗುವ ಕೋಣೆಯಲ್ಲೇ ಅಪ್ರಸ್ತುತರಾಗುತ್ತಿರುವ ತಲೆಮಾರೊಂದು ರೂಪುಗೊಳ್ಳುತ್ತಿದೆ.

ಏಳು ದೇಶಗಳಲ್ಲಿ ಸ್ಮಾರ್ಟ್ ಫೋನ್ ಬಳಕೆದಾರರ ಸಮೀಕ್ಷೆ ನಡೆಸಿರುವ ಅಧ್ಯಯನವೊಂದು– ಶೇ 60ರಷ್ಟು ಜನರು ಸ್ಮಾರ್ಟ್ ಫೋನ್‌ಗಳನ್ನು ಕೈಯಲ್ಲಿ ಹಿಡಿದುಕೊಂಡೇ ನಿದ್ದೆಹೋಗುತ್ತಿರುವ ಕಳವಳಕಾರಿ ಸಂಗತಿಯನ್ನು ಹೊರಗೆಡವಿದೆ. ಭಾರತದಲ್ಲಂತೂ ಶೇ 74 ಜನರು ತಮ್ಮ ಸ್ಮಾರ್ಟ್ ಫೋನ್‌ಗಳೊಂದಿಗೆ ನಿದ್ದೆ ಹೋಗುತ್ತಿದ್ದಾರೆ. ಪ್ರತಿ ಆರರಲ್ಲಿ ಒಬ್ಬರು ಸ್ನಾನಗೃಹದಲ್ಲಿ ಕೂಡ ಮೊಬೈಲ್ ಬಳಸುತ್ತಾರಂತೆ. ಈ ಸ್ಮಾರ್ಟ್ ಫೋನ್ ಮೋಹಿಗಳು ವಾರಾಂತ್ಯದಲ್ಲಿ ಸಂಗಾತಿಯೊಂದಿಗಿನ ಲೈಂಗಿಕ ಸಂಪರ್ಕವನ್ನು ಮರೆಯುವಷ್ಟರ ಮಟ್ಟಿಗೆ ತಮ್ಮ ಗ್ಯಾಡ್ಜೆಟ್‌ಗಳ ಮಾಯಾತೆಕ್ಕೆಗೆ ಸಿಲುಕಿದ್ದಾರೆ. ಇಷ್ಟಾದರೂ ಶೇ 39ರಷ್ಟು ಮಂದಿ ಮಾತ್ರ ತಮ್ಮ ಸ್ಮಾರ್ಟ್ ಫೋನ್‌ಗಳಿಂದ ತೃಪ್ತರಾಗಿದ್ದಾರೆ. ಶೇ 57ರಷ್ಟು ಭಾರತೀಯರಿಗೆ ಸ್ಮಾರ್ಟ್ ಫೋನ್‌ನಿಂದ ದೂರವಿರುವುದು ಸಂಕಟದ ಸಂಗತಿಯಂತೆ.

ಮನೆ ಮಾತ್ರವಲ್ಲ– ಪ್ರಾರ್ಥನಾ ಮಂದಿರಗಳು, ಹೋಟೆಲ್ ಹಾಗೂ ಚಿತ್ರಮಂದಿರಗಳಲ್ಲೂ ಮೊಬೈಲ್ ಕಿರಿಕಿರಿ ತಪ್ಪಿದ್ದಲ್ಲ. ಪ್ರಾರ್ಥನೆಯ ನಡುವೆ ಮೊಬೈಲ್ ರಿಂಗಣ ಕೇಳಿಸುತ್ತದೆ. ಒಟ್ಟಿಗೆ ಕೂತು ಊಟ ಮಾಡುವಾಗ ಆಹಾರದ ರುಚಿ ಹತ್ತಿಸುತ್ತಿದ್ದ ಹರಟೆಗೆ ಈಗ ಸಮಯವಿಲ್ಲ. ಒಂದು ಕೈಯಲ್ಲಿ ಫೋನ್‌ನ ಗುಂಡಿಗಳನ್ನು ಅದುಮುತ್ತ, ಇನ್ನೊಂದು ಕೈಯಲ್ಲಿ ಬಾಯಿಗೆ ತುತ್ತು ಇಟ್ಟುಕೊಳ್ಳುವ ಸಮಯ ಇದು. ನಮ್ಮ ಸಂವಹನದ ರೂಪವೂ ಬದಲಾಗಿದೆ. ಸ್ಪರ್ಶ, ಆಂಗಿಕ ಭಾಷೆ ಹಾಗೂ ಕಣ್ನೋಟದ ಬದಲು ಇ–ಮೇಲ್ ಅಥವಾ ಎಸ್‌ಎಂಎಸ್ ಸಂದೇಶಗಳನ್ನು ಭಾವನೆಗಳ ಸಂವಹನಕ್ಕೆ ಬಳಸಿಕೊಳ್ಳುತ್ತಿದ್ದೇವೆ. ಈ ಫೋನ್ ಸಖ್ಯ ನಮ್ಮ ಭಾವನೆಗಳನ್ನಷ್ಟೇ ದಡ್ಡುಗಟ್ಟಿಸುತ್ತಿಲ್ಲ; ದೈಹಿಕ – ಮಾನಸಿಕ ಚೈತನ್ಯವನ್ನು ಬರಡಾಗಿಸುತ್ತಿದೆ. ಕೌಟುಂಬಿಕ ಹಾಗೂ ಸಾಮಾಜಿಕ ಒಡನಾಟಗಳು ಈವರೆಗೆ ವ್ಯಕ್ತಿಪ್ರತಿಷ್ಠೆಯ ಸಂಕೇತಗಳಾಗಿದ್ದವು. ಈಗ ಮೊಬೈಲ್ ಮೂಲಕ ಹಾಗೂ ಅದು ಅನಾವರಣಗೊಳಿಸುತ್ತಿರುವ ಕೊಳ್ಳುಬಾಕ ಜಗತ್ತಿನ ಮೂಲಕ ಒಣಹೆಮ್ಮೆ ಪ್ರದರ್ಶಿಸುವ ಪರಿಸ್ಥಿತಿ.

ಮೊಬೈಲ್ ಫೋನ್‌ನಿಂದಾಗಿ ಅನೇಕ ಸವಲತ್ತುಗಳು ದೊರೆತಿರುವುದು ಸುಳ್ಳೇನಲ್ಲ. ಸಂಪರ್ಕ–ಸಂವಹನ ಕ್ಷೇತ್ರದಲ್ಲಿ ಅನೂಹ್ಯ ಕ್ರಾಂತಿಯನ್ನೇ ಉಂಟುಮಾಡಿರುವ ಮೊಬೈಲ್ ಫೋನ್‌ಗಳು ಶೈಕ್ಷಣಿಕ ಹಾಗೂ ವೃತ್ತಿಯ ಅಗತ್ಯಗಳಿಗಾಗಿಯೂ ಅನಿವಾರ್ಯ. ಆದರೆ, ಯಾವುದೇ ತಂತ್ರಜ್ಞಾನವಾದರೂ ಅದು ನಮ್ಮ ಏಳಿಗೆಗೆ – ನೆಮ್ಮದಿಗೆ ಪೂರಕ ಆಗಿರುವವರೆಗಷ್ಟೇ ಅದರೊಂದಿಗಿನ ಒಡನಾಟ ಸಹನೀಯ. ಯೌವನದ ಕಾವನ್ನು ಮರೆಸುವಷ್ಟರ ಮಟ್ಟಿಗೆ ಫೋನ್‌ಗಳನ್ನು ಹಚ್ಚಿಕೊಳ್ಳುವುದಕ್ಕೂ ಇರುಳಲ್ಲಿ ಕಂಡ ಬಾವಿಗೆ ಹಗಲಿನಲ್ಲಿ ಬೀಳುವುದಕ್ಕೂ ಹೆಚ್ಚಿನ ವ್ಯತ್ಯಾಸವೇನಿಲ್ಲ. ಯಾಂತ್ರಿಕ ಸಲಕರಣೆ ಮತ್ತು ಮನುಷ್ಯರ ಸ್ಪರ್ಶದ ನಡುವಿನ ವ್ಯತ್ಯಾಸಗಳು ಅರಿವಿಗೆ ಬರುತ್ತಿಲ್ಲ ಎಂದರೆ ಅಷ್ಟರಮಟ್ಟಿಗೆ ನಾವು ಯಂತ್ರಗಳಾಗುತ್ತಿದ್ದೇವೆ ಎಂದೇ ಅರ್ಥ.

■ ರಘುನಾಥ ಚ.ಹ.



ಈಶ್ವರ್